

### ನಿರೀಕ್ಷೆಗಳ ಹೇರಿಕೆ ತಪ್ಪಲ್ಲವೇ?

ಒಂದು ಭಾಷೆ–ಸಂಸ್ಕೃತಿಯನ್ನು ಜನರ ಮೇಲೆ ಹೇರಿಕೆ ಮಾಡುವುದು ತಪ್ಪು ಎನ್ನುವುದಾದರೆ ಇಡೀ ವ್ಯವಸ್ಥೆ ಸೇರಿ ಹೆಣ್ಣುಮಕ್ಕಳು ಹೆರಬೇಕು ಎಂದು ಹೇರಿಕೆ ಮಾಡುವುದು ತಪ್ಪಲ್ಲವೆ? ಒಂದು ಮಗುವಿಗೆ ಜನ್ಮನೀಡಿ ಅದರ ಮೇಲೆ ನಮ್ಮ ನಿರೀಕ್ಷೆಗಳನ್ನು ಹೇರಿಕೆ ಮಾಡುವುದು ತಪ್ಪಲ್ಲವೆ? ಅಪರಾಧವಲ್ಲವೇ ?

**-ಪ್ರತಿಮಾ ನಾಯ್ಕ್,** ಉದ್ಯಮಿ, ಸಾಮಾಜಿಕ ಹೋರಾಟಗಾರ್ತಿ

ಮುಗಿಯುವವರೆಗೆ ಅಂಕಗಳ ಹಿಂದೆ ಅವರನ್ನು ಓಡುವಂತೆ ಮಾಡುತ್ತೇವೆ. ಸ್ಪರ್ಧಾತ್ಮಕತೆಯ ಕಾರಣದಿಂದ ವ್ಯವಸ್ಥೆ ಮಕ್ಕಳ ಮೇಲೆ ಮಾನಸಿಕ ಒತ್ತಡ ಹೆಚ್ಚಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳ ಆತ್ಮಹತ್ಯೆ ಸಂಖ್ಯೆ ದಿನೇದಿನೇ ಹೆಚ್ಚುತ್ತಿದೆ. ನಿರುದ್ಯೋಗ ಪ್ರಮಾಣ ಯುವ ಜನತೆಯನ್ನು ಕಿತ್ತುತಿನ್ನುತ್ತಿದೆ. ಸ್ಪರ್ಧಾತ್ಮಕತೆಯ ಓಟದಲ್ಲಿ ಹಿಂದೆ ಬಿದ್ದವರಿಗೆ ಉದ್ಯೋಗ ಸಿಗುತ್ತಿಲ್ಲ. ಸರ್ಕಾರದ ಬಳಿಯೂ ಸಮಾಜದ ಬಳಿಯೂ ನಿರುದ್ಯೋಗಕ್ಕೆ ಪರಿಹಾರವಿಲ್ಲ. ನಮ್ಮ ಮಕ್ಕಳನ್ನು ನಾವು ಅನಾರೋಗ್ಯಕರ ಸ್ಪರ್ಧೆಗೆ ದೂಡಬೇಕೆ?' ಎಂದು ಪ್ರತಿಮಾ ಅವರ ವಾದವನ್ನು ಇನ್ನಷ್ಟು ವಿಸ್ತರಿಸುತ್ತಾರೆ ಪ್ರಶಾಂತ್.

'ಆರ್ಥಿಕ ಅಸಮಾನತೆ ಸಮಾಜದಲ್ಲಿ ತಾಂಡವವಾಡುತ್ತಿದೆ. ನಾವು ವಯಸ್ಕರು ಇದನ್ನು ಅರ್ಥ ಮಾಡಿಕೊಳ್ಳಬಹುದು. ಆದರೆ ಮಕ್ಕಳಿಗೆ ನಾವು ಸೃಷ್ಟಿಸಿದ ಅತಿದೊಡ್ಡ ಸಮಸ್ಯೆಯನ್ನು ಹೇಗೆ ಅರ್ಥ ಮಾಡಿಸುವುದು? ಆರ್ಥಿಕ ಸಬಲತೆ ಸಾಧಿಸಲು, ಅವಶ್ಯಕತೆ ಪೂರೈಕೆಗಾಗಿ ಜೀವನವಿಡೀ ದುಡಿಯುತ್ತಲೇ ಇರಬೇಕು ಎಂದು ಅವರ ಮೇಲೇಕೆ ಒತ್ತಡ ಹೇರಬೇಕು? ನಾವು ಬದುಕಿನಲ್ಲಿ ಊಟಕ್ಕಾಗಿ, ಬಟ್ಟೆಗಾಗಿ, ಒಟ್ಟಾರೆ ಬದುಕುವುದಕ್ಕಾಗಿ ನಡೆಸುತ್ತಿರುವ ಸಂಘರ್ಷವನ್ನು ಅವರ ಮೇಲೇಕೆ ಹೇರಬೇಕು? ಸ್ಪರ್ಧಾತ್ಮಕ ಜಗತ್ತಿನಲ್ಲಿ ಹಿಂದೆ ಬಿದ್ದ ಮಕ್ಕಳು ಬಾಲ್ಯದಲ್ಲೇ ಕೀಳರಿಮೆಗೆ ಒಳಗಾಗುತ್ತಾರೆ. ಬುದ್ಧಿಮತ್ತೆ ಕಾರಣದಿಂದ ಹಿಂದೆ ಬೀಳುವುದು ಮಕ್ಕಳ ತಪ್ಪು ಹೇಗಾಗುತ್ತದೆ? ಈ ಅಸಮಾನತೆಯನ್ನು ಮಕ್ಕಳಿಗೆ ಅರ್ಥಮಾಡಿಸಲು ಸಾಧ್ಯವಾಗದ ಸ್ಥಿತಿಯಲ್ಲಿ ಪಾಲಕರು ಸಹ ಇದ್ದಾರಲ್ಲವೆ? ಮಗುವಿನ ಬಾಲ್ಯವನ್ನು ಕೀಳರಿಮೆಯಲ್ಲಿ ಹಿಂಜರಿಕೆಗೆ ದೂಡುವ ನಾವು ಎಷ್ಟು ಸರಿ?' ಎಂದು ಕೇಳುವ ಅನುಗ್ರಹ್ ಶರ್ಮಾ – 'ಇದರರ್ಥ ಬಡವರು ಮಕ್ಕಳನ್ನು ಹೆರಬಾರದು ಎಂಬುದಲ್ಲ. ನಮ್ಮ ಸಮಾಜದಲ್ಲಿ ಎಲ್ಲಾ ರೀತಿಯ ಸಮಾನತೆ ಮೊದಲು ಸಾಧ್ಯವಾಗಬೇಕು. ಮಕ್ಕಳು ಆರೋಗ್ಯಕರವಾಗಿ ಬೆಳೆಯುವ ಪರಿಸರ ನಿರ್ಮಾಣವಾಗಬೇಕು. ಹೆಚ್ಚು ಹೆಚ್ಚು ಮಕ್ಕಳು ಹುಟ್ಟಿದಂತೆ ಅಸಮಾನತೆ, ಅನಾರೋಗ್ಯಕರ ಪೈಪೋಟಿ ಹೆಚ್ಚುತ್ತಲೇ ಹೋಗುತ್ತದೆ. ಹಾಗಾಗಿಯೇ ಮಕ್ಕಳನ್ನು ಹೆರುವುದು ನಿಲ್ಲಿಸಬೇಕು' ಎಂದು ಹೇಳುತ್ತಾರೆ.

'ಎಸ್ಸೆಸ್ಸೆಲ್ಸಿ–ಪಿಯುಸಿಯಲ್ಲಿ ಅತಿ ಹೆಚ್ಚು ರ್‍ಯಾಂಕ್ ಬರುವುದು ಹೆಣ್ಣುಮಕ್ಕಳಿಗೆ. ಫೇಸ್‌ಬುಕ್, ಗೂಗಲ್, ಮೈಕ್ರೋಸಾಫ್ಟ್‌ನಂತಹ ಕಂಪನಿಗಳ ಸಿ.ಇ.ಒ.ಗಳು ಗಂಡುಮಕ್ಕಳು. ಹಾಗಾದರೆ ಹೆಣ್ಣುಮಕ್ಕಳು ಎಲ್ಲಿ ಹೋದರು ಎಂಬ ಮಾತು ಆಗಾಗ ಸಾಮಾಜಿಕ ಜಾಲತಾಣದಲ್ಲಿ ಜೋಕ್ ಆಗಿ ಹರಿದಾಡುತ್ತದೆ. ಹೆಣ್ಣುಮಕ್ಕಳು ಶಿಕ್ಷಣದಲ್ಲಿ ಮುಂದಿದ್ದರೂ, ಉನ್ನತ ಹುದ್ದೆಗಳಲ್ಲಿ ಅವರು ಯಾಕಿರುವುದಿಲ್ಲ ಎಂಬುದನ್ನು ನೋಡಿದರೆ ಅವರು ಮದುವೆ–ತಾಯ್ತನ ಎಂಬ ಸಂಕೋಲೆಯಲ್ಲಿ ಸಿಕ್ಕಿಹಾಕಿಕೊಂಡಿರುತ್ತಾರೆ. ಇದಕ್ಕೆ ಕಾರಣ ಯಾರು? ಮಗು ಹೆರುವುದರಾಚೆ ಒಂದು ಜಗತ್ತಿದೆ. ತುಂಬ ಸರಳವಾದ ಹೊರೆಯಿಲ್ಲದ ಜಂಜಡಗಳಿರದ ಬದುಕದು. ಆ ಬದುಕನ್ನೇ ಆಯ್ಕೆ ಮಾಡಿಕೊಳ್ಳಿ ಎಂದು ನಾವು ಹೇಳುತ್ತಿದ್ದೇವೆ. ಇದು ಒಂದು ಆಯ್ಕೆಯೇ ಹೊರತು ಹೇರಿಕೆಯಲ್ಲ' ಎಂದು ಪ್ರತಿಮಾ ತಮ್ಮ ಆಂದೋಲನದ ಉದ್ದೇಶವನ್ನು ಸ್ಪಷ್ಟಪಡಿಸುತ್ತಾರೆ.

'ಆ್ಯಂಟಿ ನೈಟಲಿಸ್ಟ್' ಆಂದೋಲನದ ಕೆಲವು ಅಂಶಗಳು ಅತಿರೇಕವಾಗಿ ಕಂಡರೂ, ಅವರ ಮೂಲ ಕಾಳಜಿಯ ಮಾತುಗಳು ನಮ್ಮ ಸಮಾಜದ ಹಲವು ಮುಖ್ಯ ಸಮಸ್ಯೆಗಳತ್ತ ಬೊಟ್ಟುಮಾಡುತ್ತಿವೆ ಎಂಬುದನ್ನು ನಾವು ನಿರ್ಲಕ್ಷಿಸುವಂತಿಲ್ಲ.

ಸ್ವಂತ ಇಚ್ಛೆಯಿಂದಲೇ ಮಗುಮುಕ್ತ ಜೀವನಶೈಲಿ ಆರಿಸಿಕೊಂಡಿರುವವರ ಕುರಿತೂ ಡಾ. ಎಚ್.ಎಸ್. ಅನುಪಮಾ ಸಕಾರಾತ್ಮಕವಾಗಿಯೇ ಮಾತಾಡುತ್ತಾರೆ. 'ಮಗುಮುಕ್ತ ಯೋಚನೆ ಹೊಂದಿದವರಿಂದಲೂ ಸಮಾಜಕ್ಕೆ ನಷ್ಟವೇನೂ ಆಗುವುದಿಲ್ಲ. ಈ ಆಲೋಚನೆಯವರು ಮೊದಲಿನಿಂದಲೂ ಇದ್ದಾರೆ. ನಮ್ಮ ಸಮಾಜದಲ್ಲೂ ಇದ್ದರೇನೊ? ಆರ್ಥಿಕ ಸ್ವಾತಂತ್ರ್ಯ ಇಲ್ಲದೆ, ಅಭಿವ್ಯಕ್ತಿ ಸ್ವಾತಂತ್ರ್ಯ ಇಲ್ಲದೆ ಅವರು ಹೇಳದೆ ಇದ್ದಿರಬಹುದು. ಇಂದೂ ಮುಕ್ತವಾಗಿ ಈ ನಿರ್ಧಾರ ತೆಗೆದುಕೊಂಡಿರುವವರ ಸಂಖ್ಯೆ ಬಹಳ ಕಡಿಮೆಯಿದೆ. ಜವಾಬ್ದಾರಿಗಳ ಕಾರಣದಿಂದ ಯಾವ ಹೆಣ್ಣು ಮಗುವನ್ನು ಹೆರಲು ಇಚ್ಛಿಸುವುದಿಲ್ಲವೋ ಆಗ ಆಕೆಯ ಸಂಗಾತಿ ಮಗುವಿನ ಜವಾಬ್ದಾರಿಯನ್ನು ಹಂಚಿಕೊಳ್ಳುವ ಮಾತನಾಡಿ ಅವಳ ಮನವೊಲಿಸಬೇಕು. ನಾನು ಹೆರಲಾರದ ಕಾರಣ ನೀನು

